ಊಹಿಸಲಾಗಿದೆ. ಹಿಂದೊಮ್ಮೆ ಇವು ಬೌದ್ಧರ ಪ್ರಮುಖ ಬೋಧನೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರಬೇಕು. ಬೌದ್ಧ ಧರ್ಮದ ಮೂರು ಹಂತಗಳಾದ ಹಿನಾಯಾನ, ಮಹಾಯಾನ ಮತ್ತು ವಜ್ರಯಾನ ಈ ಅವಧಿಯಲ್ಲಿ ಕಾಣಬಹುದು. ಸಂಕರಂನಲ್ಲಿ ಈ ಮೂರು ಹಂತಗಳು ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎನ್ನುವುದಕ್ಕೆ ದ್ಯೋತಕವಾಗಿ ಬೊಜ್ಜನಕೊಂಡದ ಅವಶೇಷವೊಂದರಲ್ಲಿ ಈ ಮೂರೂ ಹಂತಗಳ ಸ್ಮಾರಕಗಳು ಕಾಣುತ್ತವೆ.

ಅವಳಿ ಗುಡ್ಡಗಳಲ್ಲಿ ಪೂರ್ವದಲ್ಲಿರುವುದು ಬೊಜ್ಜನಕೊಂಡ. ಏಕಶಿಲಾ ಸ್ತೂಪಗಳ ನಡುವೆ ಇಟ್ಟಿಗೆಯಲ್ಲಿ ನಿರ್ಮಿಸಿದ ಬೃಹತ್ ಸ್ತೂಪದ ಅವಶೇಷಗಳು ಇಲ್ಲಿವೆ. 1906ರಲ್ಲಿ ಅಲೆಕ್ಸಾಂಡ್ರಿಯಾ ಎಂಬಾತನ ಮಾರ್ಗದರ್ಶನದಲ್ಲಿ ಇಲ್ಲಿ ಮೊದಲ ಉತ್ಖನನ ನಡೆಯಿತು. ಬೃಹತ್ ಸ್ತೂಪದ ಸುತ್ತ ಚಿಕ್ಕಪುಟ್ಟ ಇಟ್ಟಿಗೆಯ ಸ್ತೂಪಗಳು, ಮತ್ತು ಸಣ್ಣ ಚೈತ್ಯಾಲಯಗಳ ಅವಶೇಷಗಳಿವೆ. ಪುರಾತತ್ವ ಇಲಾಖೆಯ ಮೂಲಗಳ ಪ್ರಕಾರ ಬೌದ್ಧ ದೇವತೆ ಹರಿತಿಯ ಶಿಲಾವಿಗ್ರಹ ಗುಡ್ಡದ ಬುಡದಲ್ಲಿ ಸಿಕ್ಕಿದೆ.

ಸುಮಾರು 50 ಮೆಟ್ಟಿಲುಗಳನ್ನು ಏರಿದರೆ ಆರು ಗುಹಾಂತರ ದೇವಾಲಯಗಳು ಸಿಗುತ್ತವೆ. ಪ್ರಧಾನ ಗುಹೆಯಲ್ಲಿ ಆರು ಸ್ತಂಭಗಳಿವೆ. ನಡುವೆ ಏಕಶಿಲಾ ಸ್ತೂಪವಿದೆ. ಸ್ತೂಪದ ಸುತ್ತ ಪ್ರದಕ್ಷಿಣೆಗೆ ಅವಕಾಶ ಕಲ್ಪಿಸಲಾಗಿದೆ. ಸ್ತೂಪದ ಮೇಲಿನ ಛಾವಣಿಯಲ್ಲಿ ಛಾತ್ರದ ಕೆತ್ತನೆ ಇದೆ. ಇದೆ ಮೇಲಂತಸ್ತಿನ ದ್ವಾರದಲ್ಲಿಯೇ ಧ್ಯಾನ ಭಂಗಿಯಲ್ಲಿ ಕುಳಿತಿರುವ ಬುದ್ಧನ ಬೃಹತ್ ಶಿಲಾ ಕೆತ್ತನೆ ಇದೆ. ಒಳಗಿನ ಗುಹಾಂತರ ದೇವಾಲಯದ ಎಡಬಲಗಳಲ್ಲಿ ಬುದ್ಧ ಮತ್ತು ಆತನ ಸಹಚರರ ಕೆತ್ತನೆ ಇದೆ. ಇವು ನಮ್ಮ ಬದಾಮಿಯ ಗುಹಾಂತರ ದೇವಾಲಯಗಳನ್ನು ನೆನಪಿಸುವಂತಿವೆ.

ಮೊದಲೆರಡು ಅಂತಸ್ತುಗಳು ಗುಹಾಂತರವಾಗಿರುವುದರಿಂದ ಹೆಚ್ಚು ಹಾನಿಗೊಳಗಾಗಿಲ್ಲ. ಆದರೆ ಮೂರನೇ ಅಂತಸ್ತಿನಲ್ಲಿ ಬೃಹತ್ ಸ್ತೂಪ ಇತ್ತು. ಅದನ್ನು ಇಟ್ಟಿಗೆಯಲ್ಲಿ ನಿರ್ಮಿಸಿದ್ದರಿಂದ ಸಂಪೂರ್ಣ ಹಾನಿಗೊಳಗಾಗಿದೆ. ಈ ಭಾಗದ ಬಲಬದಿಯಲ್ಲಿ ಪ್ರಾರ್ಥನಾ ಮಂದಿರದ ಅವಶೇಷಗಳು ಸಿಕ್ಕಿವೆ.

ಎತ್ತರಿಸಿದ ಅರೆ ವೃತ್ತಾಕಾರಾದ ಪ್ಲಾಟ್‌ಫಾರಂ ಬೌದ್ಧ ಗುರುಗಳಿಗಾದರೆ ವೃತ್ತಕಾರಕ ಪ್ಲಾಟ್‌ಫಾರಂಗಳು ಅವರ ಅನುಯಾಯಿಗಳಿಗೆ. ಇದರ ಕೆಳಗೆ ಚಿಕ್ಕಪುಟ್ಟ ಕೊಠಡಿಗಳಂಥ ನಿರ್ಮಾಣಗಳಿವೆ. ಅಲ್ಲಿ ದೀಪಗಳನ್ನು ಇಡುವ ಸ್ಥಳಗಳೂ ಇವೆ. ನೀರಿನ ಸಂಗ್ರಹಕ್ಕಾಗಿ ಕಲ್ಲಿನಲ್ಲಿ ಕೊರೆದ ಬಾವಿಗಳೂ ಪತ್ತೆಯಾಗಿವೆ. ಬೌದ್ಧ ಧರ್ಮದ ಅವಸಾನದ ಹಂತದಲ್ಲಿ ಹಿಂದೂ ಧರ್ಮ ಹೇಗೆ ತನ್ನ ಹಿಡಿತ ಸಾಧಿಸಿದ್ದಿರಬಹುದು ಎಂಬುದಕ್ಕೆ ದ್ಯೋತಕವಾಗಿ ಗಣೇಶನ ಕೆತ್ತನೆ ಮೇಲಂತಸ್ತಿನ ಸ್ತೂಪದ ಒಂದು ಭಾಗದಲ್ಲಿ ಪತ್ತೆಯಾಗಿದೆ.

ಪಶ್ಚಿಮದಲ್ಲಿರುವುದು ಲಿಂಗಲಕೊಂಡ ಗುಡ್ಡ. ಇಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ಶಿಲಾನಿರ್ಮಿತ ಸಣ್ಣಪುಟ್ಟ ಸ್ತೂಪಗಳು ಕಾಣಸಿಗುತ್ತವೆ. 1907– 08ರ ಅವಧಿಯಲ್ಲಿ ನಡೆದ ಉತ್ಖನನದ ವೇಳೆ ಹಲವು ಮಹತ್ವದ ಪುರಾತತ್ವ ದಾಖಲೆಗಳು ಇಲ್ಲಿ ಸಿಕ್ಕಿವೆ. ಮಣ್ಣಿನ ಮಡಿಕೆಗಳು, ಟೆರ್ರಾಕೋಟ ಚಿತ್ರಗಳು, ಮಣಿಗಳಲ್ಲದೇ ಕ್ರಿಸ್ತಶಕ 340ರಿಂದ 375ರ ನಡುವೆ ಆಳಿದ ಸಮುದ್ರಗುಪ್ತನ ಕಾಲಕ್ಕೆ ಸೇರಿದ ಚಿನ್ನದ ನಾಣ್ಯವೂ ದೊರಕಿದೆ. ಅಷ್ಟೇ ಅಲ್ಲದೇ ನಮ್ಮ ಚಾಲುಕ್ಯ ದೊರೆ ವಿಷ್ಣುವರ್ಧನನ ಕಾಲದ ತಾಮ್ರದ ನಾಣ್ಯಗಳು ಇಲ್ಲಿ ಸಿಕ್ಕಿವೆ. ಕುದುರೆಯ ಚಿತ್ರ ಹೊಂದಿರುವ ಸೀಸದ ಲೋಹದ ನಾಣ್ಯವೂ ಸಿಕ್ಕಿದ್ದು, ಇದು ಶಾತವಾಹನರ ಕಾಲದ್ದಾಗಿರಬಹುದು ಎಂದು ಇತಿಹಾಸಕಾರರು ಅಂದಾಜಿಸಿದ್ದಾರೆ. ಇದರ ಆಧಾರದಲ್ಲಿ ಎರಡನೇ ಶತಮಾನದಿಂದಲೇ ಇದು ಬೌದ್ಧರ ಪ್ರಾರ್ಥನಾ ಕೇಂದ್ರವಾಗಿದ್ದಿರಬಹುದು ಎಂದು ಭಾವಿಸಲಾಗಿದೆ.

ಬೌದ್ಧ ಧರ್ಮ ವಿಸ್ತಾರವಾಗುತ್ತ ಸಾಗುತ್ತಿದ್ದಂತೆ ಬೌದ್ಧ ಭಿಕ್ಷುಗಳು ಅವರು ಹಲವು ಬೋಧನಾ ಕೇಂದ್ರಗಳು ಮತ್ತು ವಿಹಾರಗಳನ್ನು ಸ್ಥಾಪಿಸುತ್ತಾ ಹೋಗುತ್ತಾರೆ. ಇದರಿಂದಾಗಿಯೇ ವಿಶಾಖಪಟ್ಟಣದ ಸುತ್ತಮುತ್ತಲಿರುವ ತೊಟ್ಲಕೊಂಡ, ಬಾವಿಕೊಂಡ ಮತ್ತು ಪವುರಲಕೊಂಡಗಳಲ್ಲಿ ವಿಹಾರಗಳು ನಿರ್ಮಾಣವಾಗಿದ್ದಿರಬೇಕು ಎಂದು ಊಹಿಸಲಾಗಿದೆ.

ಈ ಸ್ಥಳಕ್ಕೆ ಬೊಜ್ಜನಕೊಂಡ ಎಂಬ ಹೆಸರು ಬಂದದ್ದು ಏಕೆ.. ಎನ್ನುವುದೂ ಕುತೂಹಲಕರ ಪ್ರಶ್ನೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಬೌದ್ಧಭಿಕ್ಕುಗಳು ಇಲ್ಲಿ ಪ್ರಾರ್ಥನೆ ಮಾಡುತ್ತಿದ್ದರಿಂದ ಮೂಲತಃ ಇದನ್ನು ಬುದ್ಧುನಿಕೊಂಡ (ಬುದ್ಧನ ಗುಡ್ಡ) ಎಂದು ಕರೆಯುತ್ತಿದ್ದರು. ಕ್ರಮೇಣ ಇದು ಬೊಜ್ಜನಕೊಂಡವಾಗಿ ರೂಪಾಂತರ–ಗೊಂಡಿರಬೇಕು ಎಂದು ಇತಿಹಾಸಜ್ಞರು ಊಹಿಸಿದ್ದಾರೆ. ಇಂದಿಗೂ ವೈಶಾಖ ಪೂರ್ಣಿಮೆಯನ್ನು ಇಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಬೌದ್ಧ ಧರ್ಮದ ಕೊಂಡಿಯಂತಿರುವ ಈ ಸ್ಥಳಗಳನ್ನು ಸಂರಕ್ಷಿತ ಪಾರಂಪರಿಕ ಸ್ಥಳ–ವನ್ನಾಗಿ ಘೋಷಿಸಲು ಯುನೆಸ್ಕೊ ಸಂಸ್ಥೆಗೆ ಮನವಿಯೂ ಹೋಗಿದೆ.



